## ನುಬಂಧ 1 – ಪಾತ್ರಾಭಿನಯದ (ರೋಲ್ ಪ್ಲೇ) ಸ್ಕ್ರಿಪ್ಟ್

ಶಿಕ್ಷಕರು ನಾಟಕದಲ್ಲಿನ ಪಾತ್ರಗಳನ್ನು ಅಭಿನಯಿಸಲು ವಿದ್ಯಾರ್ಥಿಗಳನ್ನು ಆರಿಸುತ್ತಾರೆ. ಅವರು ಸ್ಕ್ರಿಪ್ಟ್ ಹಂಚಿ, ತಯಾರಾಗಲು ಅವರಿಗೆ 10 ನಿಮಿಷಗಳನ್ನು ನೀಡುತ್ತಾರೆ.

ಪಾತ್ರ ಪಟ್ಟಿ:

- ಅಮ್ಮ
- ಅಪ್ಪ
- ಮಗ
- ಮಗಳು
- ಅಜ್ಜ
- ಅಜ್ಜಿ

ಹಿನ್ನೆಲೆ: ಪ್ರತಿಯೊಬ್ಬರೂ ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿರುವ ದೃಶ್ಯ- ಅಮ್ಮ ತರಕಾರಿ ಹಚ್ಚಿ ಊಟದ ತಯಾರಿಯಲ್ಲಿದ್ದಾಳೆ, ಇದೇವೇಳೆ ಅವಳು ಧೂಳು, ಬಲೆಗಳನ್ನು ತೆಗೆದು ಗುಡಿಸುತ್ತಿದ್ದಾಳೆ, ಅಜ್ಜ-ಅಜ್ಜಿ ಸಂಬಂಧಿಕರ ಮದುವೆ ಬಗ್ಗೆ ಮಾತನಾಡುತ್ತಿದ್ದಾರೆ, ಒಂದು ಮಗು ಶೂ ಪಾಲಿಶ್ ಮಾಡಲು ಹೇಳುತ್ತಿದೆ, ಇನ್ನೊಂದು ತನ್ನ ಟಿಫಿನ್‌ಗೆ ಪಾಸ್ತಾ ಮಾಡಬೇಕೆಂದು ಹಠಹಿಡಿದಿದೆ, ತಂದೆಯು ದಿನಪತ್ರಿಕೆಯನ್ನು ಓದುತ್ತಿದ್ದಾರೆ. ಅಮ್ಮ ಮನೆಗೆಲಸವನ್ನು ಪೂರೈಸಲು ಹೆಣಗಾಡುತ್ತಿದ್ದಾಳೆ.
(ಸಂದರ್ಭವನ್ನು ಹೊಂದಿಸಲು ಶಿಕ್ಷಕರು ಹಿನ್ನೆಲೆಯನ್ನು ಓದಬಹುದು)

**ಅಮ್ಮ**:ನನಗೆ ಇವತ್ತು ತಡವಾಗುತ್ತಿದೆ, ಹಾಗಾಗಿ **ಆಲೂಗಡ್ಡೆಯಿಂದ** ಅಡುಗೆ ಮಾಡುತ್ತೇನೆ.

(ಅವಳು ತನ್ನ ಕೆಲಸವನ್ನು ಪ್ರಾರಂಭಿಸುತ್ತಾಳೆ)

**ಅಜ್ಜಿ**: ಮಾಲಾ, ನನಗೆ ಬಾಯಾರಿಕೆ ಆಗುತ್ತಿದೆ, ಕುಡಿಯಲು ಸ್ವಲ್ಪ ನೀರು ತಂದುಕೊಡುವೆಯಾ.

**ಮಾಲಾ(ಅಮ್ಮ)**: ಹಾ, ಖಂಡಿತ!

(**ಅಮ್ಮ**, **ಅಜ್ಜಿಗೆ** ನೀರು ತಂದುಕೊಡುತ್ತಾಳೆ)

**ಅಜ್ಜ**: ಮಾಲಾ, ನಮಗೆ ಸ್ವಲ್ಪ ಚಹಾ ಮಾಡಿ ತರುವೆಯಾ.

**ಮಾಲಾ**:ಹಾ! ತರುತ್ತೇನೆ ಮಾವಾ.

**ಮಾಲಾ** ಅಡುಗೆ ಮನೆಗೆ ಹೋಗುತ್ತಾಳೆ.

**ಮಾಲಾ**:ಒಲೆಯಲ್ಲಿ ತರಕಾರಿ ಮತ್ತು ಬೇಳೆ ಬೇಯುತ್ತಿದೆ. ಅದನ್ನು ತೆಗೆದು ನಾನು ಚಹಾ ಮಾಡಲು ಹೊರಟರೆ ಕೆಲಸಕ್ಕೆ ಹೋಗಲು ನನಗೆ ಖಂಡಿತಾ ತಡವಾಗುತ್ತದೆ.

**ಅಜ್ಜಿ**:ಮಗಳೇ! ಚಹಾ ತಯಾರಾಯ್ತಾ?

**ಮಾಲಾ**:ಆಗ್ತಾ ಇದೆ, ಸ್ವಲ್ಪ ಹೊತ್ತು.

**ಮಗ**:ಅಮ್ಮ, ನನ್ನ ಟಿಫಿನ್‌ಗೆ ಇವತ್ತು ಪಾಸ್ತಾ ಹಾಕುತ್ತೀಯಾ?

**ಅಮ್ಮ**:ಇಲ್ಲ ಮಗನೇ! ಈ ವಾರಾಂತ್ಯದಲ್ಲಿ ನಾನು ನಿನಗೆ ಪಾಸ್ತಾ ಮಾಡಿಕೊಡುತ್ತೇನೆ. ಬೆಳಗಿನ ಹೊತ್ತು ಮತ್ತೊಂದು ತಿಂಡಿ ಮಾಡುವಷ್ಟು ಸಮಯ ಇಲ್ಲ ನನಗೆ.

**ಮಗ**:ಛೆ! ನೀನು ಯಾವಾಗಲೂ ಕೆಲಸದಲ್ಲಿ ಬ್ಯುಸಿ ಇರ್ತೀಯಾ.

**ಮಗಳು**: ಅಮ್ಮಾ! ನನ್ನ ಶೂ ಪಾಲಿಶ್ ಎಲ್ಲಿಟ್ಟಿದ್ದೀಯಾ?

**ಅಮ್ಮ**: ಅದು ಶೂ ರ್‍ಯಾಕ್‌ನಲ್ಲಿಯೇ ಇದೆ.

**ಮಗಳು**: ಆದರೆ ನನಗೆ ಅದು ಸಿಗುತ್ತಿಲ್ಲ!

**ಅಮ್ಮ**: (ಶೂ ರ್‍ಯಾಕ್ ಬಳಿ ಹೋಗಿ ಅದನ್ನು ಹುಡುಕಿ ಕೊಡುತ್ತಾಳೆ). ಅಲ್ಲೇ ಹಿಂದೆ ಇರುವ ಶೂ ಅಡಿಯಲ್ಲಿ ಬಿದ್ದಿತ್ತು. ಸ್ವಲ್ಪ ಹುಡುಕಿದ್ದರೆ ನಿನಗೇ ಸಿಗುತ್ತಿತ್ತು.

ಅಪ್ಪ: ಓಹ್! ಮಾಲಾ! ಬೆಳಗ್ಗೆ ಬೇಗನೆ ಏಳಲು ಪ್ರಯತ್ನಿಸು, ಇಲ್ಲದಿದ್ದರೆ ನಿನ್ನ ಕೆಲಸಗಳು ಮುಗಿಯುವುದಿಲ್ಲ.

**ಅಮ್ಮ**:ನಾನು ಯಾವಾಗಲೂ ಬೆಳಗ್ಗೆ 5:30 ಏಳುತ್ತಿದ್ದೇನೆ. ನೀವು ಬೆಳಗ್ಗೆ 6:30ಗೆ ಏಳುತ್ತೀರಿ. ನಾನು ಈಗಾಗಲೇ ನಿಮಗಿಂತ ಒಂದು ಗಂಟೆ ಮುಂಚಿತವಾಗಿ ಏಳುತ್ತೇನೆ.

**ಅಪ್ಪ**:ಹೌದಾ, ಹಾಗಾದರೆ ನಿನ್ನ ಕೆಲಸಗಳು ಮುಗಿಯಬೇಕೆಂದರೆ ನೀನು ಬೆಳಗ್ಗೆ 5:00 ಗಂಟೆಗೆ ಏಳಬೇಕು ಅನಿಸುತ್ತೆ ನನಗೆ.

ಎಲ್ಲರೂ (ಮಗಳನ್ನು ಹೊರತುಪಡಿಸಿ): ಹೌದು! ನೀನು ಬೇಗನೆ ಏಳಬೇಕು!

(**ಅಮ್ಮನ ಮುಖದಲ್ಲಿ ಬೇಜಾರು ಕಾಣುತ್ತದೆ**)

**ಮಗಳು**:ಯಾಕೆ ಅವಳು ಮಾತ್ರ ಬೇಗನೇ ಏಳಬೇಕು? ನಾವೆಲ್ಲರೂ ಮಾಮೂಲಿ ಸಮಯಕ್ಕಿಂತ ಕೇವಲ 10 ನಿಮಿಷ ಮುಂಚಿತವಾಗಿ ಎದ್ದು ಅಮ್ಮನಿಗೆ ನೆರವಾದರೆ! ಅವಳಿಗೆ ಎಷ್ಟೋ ಸಮಯ ಉಳಿತಾಯವಾಗಬಹುದು. ಅವಳು ಕಷ್ಟಪಡಬೇಕಾಗಿ ಬರುವುದಿಲ್ಲ. ಮನೆಗೆಲಸವನ್ನು ಮಾಡುವುದು ಕೇವಲ ಅವಳು ಮಾತ್ರ ಮಾಡುವ ಕೆಲಸವಲ್ಲ! ಕುಟುಂಬದ ಸದಸ್ಯರೆಲ್ಲರೂ ಕೆಲಸವನ್ನು ಹಂಚಿಕೊಳ್ಳಬೇಕು. ಆಕ್ಟಿಝೆನ್ಸ್ ಕ್ಲಬ್‌ನಲ್ಲಿ ನನ್ನ ಶಿಕ್ಷಕರು ನನಗೆ ಇದನ್ನು ಹೇಳಿಕೊಟ್ಟಿದ್ದಾರೆ.

**ಅಜ್ಜಿ**:ಹೌದು ನೀನು ಹೇಳುವುದು ಸರಿ! ನಾಳೆಯಿಂದ ನಾವೆಲ್ಲರೂ ಪ್ರಯತ್ನಿಸೋಣ.

ಮರುದಿನ -(ಪ್ರತಿಯೊಬ್ಬರೂ ಮಾಮೂಲಿಗಿಂತ 10 ನಿಮಿಷ ಬೇಗನೆ ಏಳುತ್ತಾರೆ)

**ಅಜ್ಜಿ**:ಸೊಸೆ, ನಾನು ನಿನಗೆ ತರಕಾರಿ ಹಚ್ಚಿ ಕೊಡುತ್ತೇನೆ.

**ಅಪ್ಪ**:ನಾನು ಗಿಡಗಳಿಗೆ ನೀರು ಹಾಕುತ್ತೇನೆ.

ಮಕ್ಕಳು:ನಾವು ಅಜ್ಜ-ಅಜ್ಜಿಗೆ ನೀರು ಇತ್ಯಾದಿ ತಂದುಕೊಟ್ಟು, ನಮ್ಮ ಶಾಲೆ ಬ್ಯಾಗುಗಳನ್ನು ನಾವೇ ಸಿದ್ಧಪಡಿಸಿಕೊಂಡು ಶಾಲೆಗೆ ಹೊರಡುತ್ತೇವೆ.

**ಅಜ್ಜ**:ನಾನು ಮಕ್ಕಳನ್ನು ಸ್ಕೂಲ್ ಬಸ್ಸಿಗೆ ಹತ್ತಿಸಿ ಬರುತ್ತೇನೆ.

ಎಲ್ಲರೂ ಸಹಾಯ ಮಾಡಲು ಪ್ರಾರಂಭಿಸುತ್ತಾರೆ,

ಎಲ್ಲ ಕೆಲಸಗಳೂ ಸುಸೂತ್ರವಾಗಿ ನಡೆಯುತ್ತವೆ.

**ಅಮ್ಮ**:ಇನ್ನೂ 9:00 ಗಂಟೆ ಆಗಿದೆಯಷ್ಟೆ, ನನ್ನ ಕೆಲಸಗಳೆಲ್ಲವೂ ಮುಗಿದವು! ಇವತ್ತು ನನಗೆ ಹೆಚ್ಚು ಸಮಯ ಸಿಕ್ಕಿದೆ! ನಾವು ಇನ್ನೂ ಒಂದು ಚಹಾ ಮಾಡಿ ಎಲ್ಲರೂ ಒಟ್ಟಿಗೆ ಕುಡಿಯೋಣ.